ಮೂರು ಹೆಚ್ಚುವರಿ ಕುಟುಂಬ ನ್ಯಾಯಾಲಯಗಳು ಇವೆ.

ಆ) ಈ ನ್ಯಾಯಾಲಯಗಳಲ್ಲಿ ಕಳೆದ ೩ ವರ್ಷಗಳಲ್ಲಿ ಒಟ್ಟು ೬,೪೨೮ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಅವುಗಳ ವಿವರಗಳು ಈ ಕೆಳಕಾಣಿಸಿದಂತೆ ಇವೆ:

ವರ್ಷ	ಸಿವಿಲ್	ಕ್ರಿಮಿನಲ್
೧೯೯೭	೧೬೬೯	೫೭೩
೧೯೯೮	೧೫೦೩	೪೦೭
೧೯೯೯	೧೭೪೪	೪೪೪
ಒಟ್ಟು	೪೯೬೦	೧೪೬೪

ಇ) ನಿಜವಲ್ಲ. ಈ ಹಿಂದೆ ಶೆಡ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಕುಟುಂಬ ನ್ಯಾಯಾಲಯಗಳನ್ನು ಬೆಂಗಳೂರು ನಗರ ಸಿವಿಲ್ ನ್ಯಾಯಾಲಯಗಳ ಸಮುಚ್ಚಯಕ್ಕೆ ಸ್ಥಳಾಂತರಿಸಲಾಗಿದೆ.

ಈ) ನಿಜವಲ್ಲ. ಮೂರು ಕುಟುಂಬ ನ್ಯಾಯಾಲಯಗಳು ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯಗಳ ಸಮುಚ್ಚಯದ ನೆಲಮಹಡಿಯಲ್ಲಿ ಮತ್ತು ಇನ್ನೊಂದು ಕುಟುಂಬ ನ್ಯಾಯಾಲಯವು ಮೊದಲನೆಯ ಮಹಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಉ) ನಿಜವಲ್ಲ. ನ್ಯಾಯಾಲಯ ಕೊಠಡಿಗಳಲ್ಲಿ ಕುಳಿತು ಕೊಳ್ಳಲು ಹಾಗೂ ನಿಂತುಕೊಳ್ಳುವುದಕ್ಕೆ ಸ್ಥಳಾವಕಾಶವನ್ನು ಏರ್ಪಡಿಸಲಾಗಿದೆ.

ಊ) ಕೊರತೆ ಇರುವುದು ನಿಜವಲ್ಲ. ಬೆಂಗಳೂರಿನ ನಗರ ಸಿವಿಲ್ ನ್ಯಾಯಾಲಯಗಳ ಸಮುಚ್ಚಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಲಯಗಳಲ್ಲಿ ಶೌಚಾಲಯ ಮತ್ತು ನೀರಿನ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.

ಋ) ಈ ಮೇಲಿನ ಪ್ರಶ್ನೆಗಳಿಗೆ ನೀಡಿರುವ ಉತ್ತರದ ಕಾರಣ ಈ ಪ್ರಶ್ನೆಗೆ ಉತ್ತರ ಉದ್ಭವಿಸುವುದಿಲ್ಲ.

ರಾಜ್ಯ ನಿರ್ಮಾಣ ನಿಗಮದಲ್ಲಿನ ಅವ್ಯವಹಾರಗಳು.

೨೧೫೨(೨೭೩೧)

ಶ್ರೀ ಪಿ.ಹೆಚ್.ಪೂಜಾರ್(ಬಾಗಲಕೋಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ನಿರ್ಮಾಣ ನಿಗಮದಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ತೆಗೆದುಕೊಂಡಿರುವ ಕ್ರಮಗಳೇನು?

ಆ) ಎಷ್ಟು ಕೋಟಿ ರೂಪಾಯಿಗಳ ಅವ್ಯವಹಾರ ನಡೆದಿದೆ; ಈ ವ್ಯವಹಾರದಲ್ಲಿ ಯಾವ ಯಾವ ಅಧಿಕಾರಿಗಳು ಶಾಮೀಲಾಗಿದ್ದಾರೆ, ಇವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):

ಅ) ಗಮನಕ್ಕೆ ಬಂದಿದೆ. ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

೧) ಕರ್ನಾಟಕ ರಾಜ್ಯ ನಿರ್ಮಾಣ ನಿಗಮದಲ್ಲಿ ೧೯೯೦-೯೧ ರಿಂದ ೧೯೯೪-೯೫ರ ಅವಧಿಯಲ್ಲಿ ನಡೆದಿದೆಯೆನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ನಿವೃತ್ತ ಜಿಲ್ಲಾ ನ್ಯಾಯಾಧೀಶರ ನೇತೃತ್ವದಲ್ಲಿ ವಿಚಾರಣಾ ಆಯೋಗವನ್ನು ನೇಮಿಸಿದೆ.

೨) ಕೆ.ಆರ್.ಎಸ್.ಆಧುನೀಕರಣ ಕಾಮಗಾರಿಗಳಲ್ಲಿ ನಡೆದಿದೆಯೆನ್ನಲಾದ ಅಕ್ರಮಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟವರ ವಿರುದ್ಧ ಕರ್ನಾಟಕ ಸರ್ಕಾರಿ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು)ನಿಯಮಾವಳಿಗಳು ೧೯೫೭ರ ನಿಯಮ ೧೧ರ ರೀತ್ಯ ಇಲಾಖಾ ವಿಚಾರಣೆ ಹೂಡಲಾಗಿದೆ.

ಆ) ವಿಚಾರಣಾ ಆಯೋಗದ ವರದಿ ಮತ್ತು ವಿಚಾರಣಾ ಅಧಿಕಾರಿಗಳ ವರದಿ ಬಂದ ನಂತರ ನಷ್ಟದ ನಿಖರವಾದ ಮೊತ್ತವೆಷ್ಟು ಎಂದು ತಿಳಿದು ಬರುತ್ತದೆ. ಅಧಿಕಾರಿಗಳ ಹೆಸರು ಆಯೋಗದ ವರದಿ ಬಂದ ನಂತರ ತಿಳಿದು ಬರುತ್ತದೆ. ವಿಚಾರಣಾ ಆಯೋಗ: ವಿಚಾರಣಾ ಅಧಿಕಾರಿಗಳ ವರದಿ ಬಂದ ನಂತರ ಅದರ ಪ್ರಕಾರ ತಪ್ಪಿತಸ್ಥರೆಂದು ಕಂಡು ಬಂದ ಅಧಿಕಾರಿಗಳ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು. ವಿಚಾರಣಾ ಆಯೋಗದ ವರದಿ ಬಂದ ನಂತರ ಸಂಬಂಧಪಟ್ಟವರಿಂದ ನಷ್ಟದ ಮೊತ್ತ ವಸೂಲಾತಿಗೆ ಕ್ರಮ ಜರುಗಿಸಲಾಗುವುದು.

ಮುಂಡರಗಿ ತಾಲ್ಲೂಕಿನಲ್ಲಿ ಪಶುವೈದ್ಯಕೀಯ ಆಸ್ಪತ್ರೆ ಹಾಗೂ ಕೃತಕ ಗರ್ಭಧಾರಣ ಕೇಂದ್ರಗಳ ಸಂಖ್ಯೆ.